# ನಮ್ಮ ಸಂಸ್ಕೃತಿ ಪರಿಚಯ – ೫

**ಆಂಗ್ಲ ಮೂಲ : ಸೀತಾ ಲಖಾನಿ; ಕನ್ನಡ ಅನುವಾದ : ರಘು ಎ.ಎನ್.**

## ದೇವರನ್ನು ತಾಯಿಯಂತೆ ಕಾಣುವುದು

ಹಿಂದೂಗಳಲ್ಲಿ ಕೆಲವರು ದೇವರನ್ನು ಮಾತೆಯ ರೂಪದಲ್ಲಿ ನೋಡಲು ಬಯಸುತ್ತಾರೆ. ಆದ್ದರಿಂದ ದೇವರನ್ನು ಮಾತೆಯೆಂದು, ದೇವಿಯೆಂದು ಪೂಜಿಸುತ್ತಾರೆ. ತಾಯಿಯ ರೂಪದ ದೇವತೆಯು ಎಲ್ಲಾ ರೀತಿಯ 'ಶಕ್ತಿ' ಮತ್ತು 'ಬಲ' ಗಳ ಮೂಲವಾಗಿದ್ದಾಳೆ. ಅವಳು 'ಶಕ್ತಿಸ್ವರೂಪಿಣಿ'ಯಾಗಿರುವಳು. ಶಕ್ತಿ ಮತ್ತು ಬಲಗಳನ್ನು ಪಡೆದುಕೊಳ್ಳುವಲ್ಲಿ ಈ ಮಾತೆಯು ನಮಗೆ ಸಹಾಯ ಮಾಡುವಳು. ಹೀಗಾಗಿ ದೇವರನ್ನು ತಾಯಿಯಂತೆ ಹಲವು ರೂಪಗಳಲ್ಲಿ ಜನರು ಪೂಜಿಸುತ್ತಾರೆ. ಅಂತಹ ರೂಪಗಳಲ್ಲಿ ಕೆಲವನ್ನು ಈಗ ನೋಡೋಣ :



**ಪಾರ್ವತಿ ಮತ್ತು ದುರ್ಗೆ:** ದೇವರನ್ನು ಮಾತೆಯೆಂದು ನೋಡುವ ಹಲವು ರೀತಿಗಳಲ್ಲಿ ಪಾರ್ವತಿಯ ರೂಪವೂ ಒಂದು. ಈ ಮಾತೆಯು ಎಲ್ಲಾ ಶಕ್ತಿಗಳ ಮೂಲವಾಗಿದ್ದಾಳೆ. ಅವಳು ದುಷ್ಟರನ್ನು ಸಂಹರಿಸಲು ದುರ್ಗೆಯಾಗಿ ಅವತರಿಸುವಳು. ದುರ್ಗಾಮಾತೆಯು ಹುಲಿ ಅಥವಾ ಸಿಂಹವನ್ನು ತನ್ನ ವಾಹನವನ್ನಾಗಿ ಮಾಡಿಕೊಂಡು ದುಷ್ಟರನ್ನು ಸಂಹರಿಸುವ ಆಯುಧಗಳನ್ನು ಹಿಡಿದಿರುವಳು.



**ಸರಸ್ವತಿ :** ದೇವರನ್ನು ಸರಸ್ವತಿಯ ರೂಪದಲ್ಲಿ ಕೂಡ ಪೂಜಿಸಬಹುದು. ಸರಸ್ವತಿ ಮಾತೆಯು 'ವಿದ್ಯಾಸ್ವರೂಪಿಣಿ.' ಕಲೆ, ವಿಜ್ಞಾನ, ಸಂಗೀತ, ನೃತ್ಯ ಮುಂತಾದ ಸದ್ವಿದ್ಯೆಗಳನ್ನು ಕಲಿಯಲು ಸರಸ್ವತಿ ಮಾತೆಯು ನಮ್ಮನ್ನು ಆಶೀರ್ವದಿಸುವಳು. ಅವಳು ಬಿಳಿಯ ಸೀರೆಯನ್ನು ಧರಿಸಿ, ತನ್ನ ಕರಗಳಲ್ಲಿ ಪುಸ್ತಕವನ್ನೂ ವೀಣೆಯನ್ನೂ ಹಿಡಿದಿರುವಳು.



**ಲಕ್ಷ್ಮಿ :** ಹಿಂದೂಗಳು ದೇವರನ್ನು ಲಕ್ಷ್ಮೀದೇವಿಯ ರೂಪದಲ್ಲಿ ಕೂಡ ಪೂಜಿಸುವರು. ಲಕ್ಷ್ಮಿಯು 'ಸಂಪತ್ತು ಮತ್ತು ಸೌಂದರ್ಯ' ದ ಅಧಿದೇವತೆಯಾಗಿದ್ದಾಳೆ. ಅವಳು ಕಮಲಪುಷ್ಪದ ಮೇಲೆ ಕುಳಿತು ತನ್ನ ಭಕ್ತರಿಗೆ ಸಂಪತ್ತಿನ ಸಂಕೇತವಾದ ಚಿನ್ನದ ನಾಣ್ಯಗಳನ್ನು (ಧನ) ಸದಾ ಹರಿಸುತ್ತಿರುತ್ತಾಳೆ.



**ನಮ್ಮ ಆದರ್ಶವಾಗಿ ರಾಮ ಮತ್ತು ಸೀತೆಯರು :** ಶ್ರೀರಾಮನು ವಿಷ್ಣುವಿನ ಅವತಾರಗಳಲ್ಲಿ ಒಬ್ಬನು. ಅವನು ನಿಷ್ಠೆ, ಪ್ರಾಮಾಣಿಕತೆ, ಪರಿಪೂರ್ಣತೆಗಳ ಸ್ವರೂಪನಾದ್ದರಿಂದ 'ಪುರುಷೋತ್ತಮ'ನಾಗಿದ್ದಾನೆ. ಇತರರಿಗೆ ಸಹಾಯ ಮಾಡುತ್ತಾ ಉತ್ಕೃಷ್ಟ ಜೀವನವನ್ನು ಶ್ರೀರಾಮನು ನಡೆಸಿದನು. ಪವಿತ್ರಾತ್ಮಳಾದ, ಸದ್ಗುಣಿಯಾದ, ಪತಿಪರಾಯಣೆಯಾದ ಸೀತಾಮಾತೆಯು ಶ್ರೀರಾಮನ ಪತ್ನಿ. ಎಲ್ಲ ಹಿಂದೂ ಮಹಿಳೆಯರೂ ಸೀತೆಯಂತಾಗಲು ಬಯಸುತ್ತಾರೆ. ಚಿತ್ರಪಟಗಳಲ್ಲಿ ಶ್ರೀರಾಮನು ಧನುಸ್ಸನ್ನು ಹಿಡಿದು, ಸೀತೆ, ತನ್ನ ತಮ್ಮನಾದ ಲಕ್ಷ್ಮಣ ಮತ್ತು ಪರಮಭಕ್ತನಾದ ಹನುಮಂತನೊಡನೆ ಇರುತ್ತಾನೆ. ರಾಮಾಯಣವು ಹಿಂದೂಗಳ ಪವಿತ್ರಗ್ರಂಥಗಳಲ್ಲಿ ಒಂದಾಗಿದೆ. ಮಕ್ಕಳು ರಾಮಾಯಣದಲ್ಲಿರುವ ರಾಮ, ಸೀತೆ, ಹನುಮಂತ ಮುಂತಾದ ಆದರ್ಶ ಪಾತ್ರಗಳನ್ನು ಒಳಗೊಂಡ ಕಥೆಗಳನ್ನು ಓದುತ್ತಾರೆ; ಆ ಮೂಲಕ ತಮ್ಮ ಧರ್ಮದ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳುತ್ತಾರೆ.



**ಶೌರ್ಯ ಮತ್ತು ಬಲಶಾಲಿಯಾಗಿ ಹನುಮಂತ :** ಹನುಮಂತನು ವಾನರದೇವ. ಅವನು ಶಕ್ತಿ, ಧೈರ್ಯ ಮತ್ತು ಶೌರ್ಯಗಳ ಸಾಕಾರಮೂರ್ತಿ. ಅವನು ಪರ್ವತಗಳನ್ನು ಎತ್ತಬಲ್ಲ. ಆದರೆ ಕೆಲವೊಮ್ಮೆ ಸ್ವಲ್ಪ ತುಂಟ. ಮಕ್ಕಳು ಹನುಮಂತನ ಕಥೆಗಳನ್ನು ಪ್ರೀತಿಯಿಂದ ಕೇಳುತ್ತಾರೆ ಮತ್ತು ಹನುಮಂತನಂತೆಯೇ ಶಕ್ತಿಶಾಲಿಗಳಾಗಲು, ಧೈರ್ಯಶಾಲಿಗಳಾಗಲೂ ಬಯಸುತ್ತಾರೆ. ಇದು ಮಕ್ಕಳನ್ನು ದೇವರ ಕೆಲಸವನ್ನು ಮಾಡಲು ಪ್ರಚೋದಿಸುತ್ತದೆ ಹಾಗೂ ತುಂಟರಾಗಿದ್ದರೂ ಒಳ್ಳೆಯವರಾಗಲು ಪ್ರೇರೇಪಿಸುತ್ತದೆ. ❐